ಅರಣ್ಯ ಬೆಳೆಸುವ ಯೋಜನೆಯಡಿಯಲ್ಲಿ ವಿದೇಶಿ ಸಹಾಯ.

2518 - ಶ್ರೀ ಬಸನಗೌಡ ಆರ್. ಪಾಟೀಲ್ (ವಿಜಾಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅರಣ್ಯ ಬೆಳೆಸುವ ಯೋಜನೆಯ ಅಡಿಯಲ್ಲಿ ವಿದೇಶಿ ಸಹಾಯ ಪಡೆದು ಅಭಿವೃದ್ಧಿ ಪಡಿಸುವ ಯೋಜನೆ ಇರುವುದು ನಿಜವೇ?

ಆ) ಈ ಯೋಜನೆಗೆ ಎಷ್ಟು ಹಣ ಪಡೆಯಲಾಗಿದೆ.

ಇ) ಯಾವ ಯಾವ ಜಿಲ್ಲೆಗಳು ಈ ಯೋಜನೆಯ ಅಡಿಯಲ್ಲಿ ಬರುತ್ತದೆ.

ಈ) ಭೀಕರ ಬರದ ಛಾಯೆಯಲ್ಲಿರುವ ವಿಜಾಪುರ ಜಿಲ್ಲೆಯನ್ನೂ ಸಹ ಈ ಯೋಜನೆಯ ಅಡಿಯಲ್ಲಿ ಸೇರಿಸಲಾಗುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ಹೌದು

ಆ) ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆ 1992-93ರಿಂದ ಅನುಷ್ಠಾನಗೊಳಿಸಲ್ಪಟ್ಟಿದ್ದು ವರ್ಷವಾರು ಪಡೆದ ವಿದೇಶಿ ಸಹಾಯ ಈ ಕೆಳಗಿನಂತಿದೆ:

		ನಿಗಧಿಪಡಿಸಿದ ಹಣ ರೂ. ಲಕ್ಷಗಳಲ್ಲಿ	ವೆಚ್ಚ ಮಾಡಿದ ಹಣ ರೂ. ಲಕ್ಷಗಳಲ್ಲಿ
1)	1992-93	729.00	453.490
2)	1993-94	1124.00	1027.645
3)	1994-95	1366.00	1300.507
4)	1995-96	1500.00	1505.460
5)	1996-97	1800.00	

ಇ) ಯೋಜನೆಯ ಪ್ರಾರಂಭದಲ್ಲಿ ಈ ಯೋಜನೆಯನ್ನು ರಾಜ್ಯದ ಉತ್ತರಕನ್ನಡ ಜಿಲ್ಲೆಯಲ್ಲಿ 1992-93ರಿಂದ ಅನುಷ್ಠಾನಗೊಳಿಸಿ ತದನಂತರ 1995-96ನೇ ಸಾಲಿನಿಂದ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ) ವಿಜಾಪುರ ಜಿಲ್ಲೆಯು ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆ (ಸಾಗರೋತ್ತರ ಅಭಿವೃದ್ಧಿ ಸಂಸ್ಥೆ) ಯೋಜನೆಯಡಿ ಬರುವುದಿಲ್ಲ.

ಮಾಗಡಿ ತಾಲ್ಲೂಕಿನಲ್ಲಿ ಸಾಕ್ಷರತಾ ಕಾರ್ಯಕ್ರಮ.

2612 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನಲ್ಲಿ ಇರುವ ಅನಕ್ಷರಸ್ಥರ ಸಂಖ್ಯೆ ಎಷ್ಟು? (ಪುರುಷರ ಮತ್ತು ಮಹಿಳೆಯರ ಪ್ರತ್ಯೇಕ ವಿವರ ನೀಡುವುದು)

ಆ) ಇವರನ್ನು ಸಾಕ್ಷರಸ್ಥರನ್ನಾಗಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ? ಮಾಗಡಿಯಲ್ಲಿ ಸಾಕ್ಷರತಾ ಕಾರ್ಯಕ್ರಮಕ್ಕೆ ಬಂದಿರುವ ಹಣವೆಷ್ಟು? ಈವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಸಚಿವರು) :